ಅದ್ವೈತ ಎಂಬ ಕುಹಕವನ್ನು ಕೇಳಿಕೊಂಡೇ ಬದುಕು ಸವೆಸಿದವಳು ಅವಳು. ಮಗ ಅಮೆರಿಕಕ್ಕೆ ಬಂದುಬಿಡು ಅಂತ ಕರೆದಾಗ ಇಲ್ಲವೆಂದುಬಿಡುತ್ತಾಳೆ.

ಈ ಕಥಾನಕದಲ್ಲಿ ಕಡೆಗೂ ಗೆಲ್ಲುವವಳು ಅಕ್ಷರಾಳೇ. ಪೂರಾ ಬೇರೆಯಾಗಿರುವ, ಭಿನ್ನ ನಂಬಿಕೆಗಳಿರುವ ಇಬ್ಬರು ಒಟ್ಟಾಗಿ ಜೀವನ ಮಾಡಬಹುದು ಎಂದು ನಾನು ಬಲವಾಗಿ ನಂಬಿದ್ದೇನೆ ಎನ್ನುವ ಅವಳ ಮಾತಿಗೆ ಅವಳ ಚಿಕ್ಕ ವಯಸ್ಸಿನ ಮುಗ್ಧತೆ ಮತ್ತು ಅನುಭವದ ಅಭಾವ ಮಾತ್ರ ಕಾರಣ ಅಂತ ಅಲ್ಲಗಳೆಯಲಾಗದು. ತನ್ನ ಸಂಗಾತಿ ಆಗಲಿರುವ ಕೆವಿನ್‌ನಿಗೆ, 'ನಾನು ನಿನ್ನ ನಂಬಿಕೆಗಳನ್ನು ಗೌರವಿಸುತ್ತೇನೆ. ಆದರೆ ಆಚರಣೆಗಳನ್ನಲ್ಲ' ಎಂದು ಹೇಳಬಲ್ಲವಳು ಅವಳು. ಮಂಗಲಸೂತ್ರವೂ ಇಲ್ಲದ ಮೆಹೆಂದಿ-ಸಂಗೀತ್-ಬಾರಾತ್ ಎಂಬ ಬಾಲಿವುಡ್ ಪಾರ್ಟಿ ಮದುವೆ ಮಾಡಿಕೊಳ್ಳುವುದು ಅವಳ ಆಕಾಂಕ್ಷೆ.

ಅಕ್ಷರಾಳ ಈ ನಿಲುವು ಎಷ್ಟೇ ಆಕರ್ಷಕವಾಗಿ ಕಂಡರೂ ಅದರಲ್ಲೇ ಒಂದು ವೈರುಧ್ಯವಿದೆ. ಎಲ್ಲ ಸಮಸ್ಯೆಗಳಿಗೂ ಆಧುನೀಕರಣವೇ ಪರಿಹಾರ ಎನ್ನುವ ಹೊಸಕಾಲದ ಹುಸಿ ತತ್ವದತ್ತ ಅಕ್ಷರಾಳ ಈ ಮನೋಗತ ಬೆರಳು ಮಾಡುತ್ತಿರಬಹುದು. ಹೀಗಾಗಿಯೇ ಅವಳು ಆತ್ಮವಿಶ್ವಾಸದಿಂದ ಮದುವೆಗೂ ಮೊದಲೇ ವಿಚ್ಛೇದನದ ಕುರಿತೂ ಬಿಡುಬೀಸಾಗಿ ಮಾತನಾಡಬಲ್ಲವಳಾಗಿದ್ದಾಳೆ.

ಕ್ರಿಶ್ಚಿಯನ್ ಧರ್ಮದಲ್ಲಿ ತನ್ನ ಬಹುಪತ್ನಿತ್ವಕ್ಕೆ, ಪತಿ-ಪತ್ನಿಯರನ್ನು 'ಸೀಲ್' ಮಾಡುವ ಶಾಶ್ವತ ಮದುವೆಗಳಿಗೆ ಹೆಸರಾಗಿರುವ ಮಾರ್ಮನ್ ಪಂಥಕ್ಕೆ ಸೇರಿದ ಕೆವಿನ್ ಅಕ್ಷರಾಳಷ್ಟು ಆಧುನಿಕನಲ್ಲ. ಪ್ಲೇಸ್ಟೇಷನ್ನಿನಲ್ಲೂ ಬೈಬಲ್ ಗೇಮ್‌ಗಳನ್ನು ಆಡುವ ಈತ ಅಕ್ಷರಾಳ ಮೇಲಿನ ಪ್ರೇಮದಿಂದ ತನ್ನತನದ ಜೊತೆಗೆ ಸಾಕಷ್ಟು ರಾಜಿ ಮಾಡಿಕೊಂಡಿದ್ದಾನೆ. ಒಬ್ಬ ಸತ್ಪುರುಷನ ಜತೆಗಿನ ಮದುವೆಯೆಂಬ ಸಂಬಂಧದಿಂದ ಆತನ ಇಡೀ ಕುಟುಂಬ ಆ ಮನುಷ್ಯನ ಸಚ್ಚಾರಿತ್ರ್ಯದ ಪ್ರಭಾವದಿಂದಲೇ ನೇರವಾಗಿ ಸ್ವರ್ಗಕ್ಕೆ ಹೋಗುತ್ತದೆ ಎಂದು ಸಾದರಪಡಿಸುವ ಮಾರ್ಮನ್ ಪಂಥಕ್ಕೂ, ದೀಕ್ಷೆ ತೊಗೊಂಡ ದ್ವೈತಿಗಳೆಲ್ಲ ವೈಷ್ಣವರಿರಬಹುದು, ಮಾಧ್ವರಲ್ಲ ಎಂದು ಪ್ರತಿಪಾದಿಸುವ ಮಾಧ್ವಮತಕ್ಕೂ ಸಮಾನಾಂತರ ರೇಖೆಯನ್ನೆಳೆಯುತ್ತ ಅನಂತ ಕತೆ ಮುಂದುವರೆಸುತ್ತಾನೆ. ಇಲ್ಲಿ, ಮಾರ್ಮನ್ನರೂ, ಮಾಧ್ವರೂ ತರತಮವಾದಿಗಳೇ.

ಒಬ್ಬ ಹುಡುಗಿ ಋತುಮತಿಯಾಗಿ ಬಸಿರಾಗುವ ಸಾಮರ್ಥ್ಯವನ್ನು ಪಡೆದ ತಕ್ಷಣ ಆಕೆ ಪ್ರಾಪ್ತ ವಯಸ್ಕಳು ಎಂಬ ಆನಾಳ ಮಾತು ಹೆಣ್ಣನ್ನು ಒಂದು ಗರ್ಭವಾಗಿ ಮಾತ್ರ ನೋಡುವ ಮೂಲಭೂತವಾದಿ ವಿತಂಡವಾದಕ್ಕೆ ಕನ್ನಡಿ ಹಿಡಿದಂತಿದೆ. ಉಪವಾಸ, ಪಾರಣೆಗಳನ್ನು ಮಾಡಿಯೂ ಮೋಕ್ಷಕ್ಕೆ ಅರ್ಹನಲ್ಲದ ಗಾಜನೂರಿನ ಹನುಮ, ಮತ್ತು ತನ್ನಿಷ್ಟದ ಲಲಿತಾ ಸಹಸ್ರನಾಮವನ್ನು ಗಟ್ಟಿಯಾಗಿ ಹೇಳಿಕೊಳ್ಳಲೂ ಮನೆಯಲ್ಲಿ ಅವಕಾಶವಿರದ ರುಕ್ಮಿಣಿಯ ಸೋಲು ಧರ್ಮದ ಆಷಾಢಭೂತಿತನವನ್ನು ಚಿತ್ರಗಳಲ್ಲೇ ನಿರೂಪಿಸುತ್ತದೆ. ಜಾಗತೀಕರಣ ಮತ್ತು ಆಧುನೀಕರಣ ಎರಡೂ ಒಟ್ಟೊಟ್ಟಿಗೆ ಹೋಗುವುದಿಲ್ಲ, ಬದಲಾಗಿ ಹೊಸಕಾಲದ ಸಾಧನಗಳು ನಮ್ಮನ್ನು ಇನ್ನಷ್ಟು ವಿಘಟಿತಗೊಳಿಸಿವೆ ಎಂಬುದನ್ನು ಅನಂತ ತಾನು ಕಂಡುಕೊಳ್ಳುತ್ತಲೇ ನಮಗೂ ಕಾಣಿಸುತ್ತಾನೆ.

'ನರ್ಮದಾ, ನೀನು ಯಾರಾದರೂ ಮಠದ ಆಚಾರರ ಸ್ಮಾರ್ಟ್ ಫೋನು ನೋಡಿದೀಯಾ? ಮಧ್ವಾಚಾರ್ಯರ ಚಿತ್ರ ಸ್ಕ್ರೀನ್‌ಸೇವರ್ ಇರುತ್ತದೆ. ಪ್ರೀಣಯಾಮಂ ವಾಸುದೇವಂ ರಿಂಗ್‌ಟೋನಿರುತ್ತದೆ. ಸತ್ಯಂ ಜಗತ್ ಅಂತ ವಾಟ್ಸಾಪ್ ಸ್ಟೇಟಸ್ ಇರುತ್ತೆ. ಅಬ್ಜೇಶನ ಔಡಿ ಕಾರು ಬ್ಯಾಕಪ್ ಆಗುವಾಗ 'ಜಯತಿ ತೇದಿಕಂ' ಶ್ಲೋಕ ಬರುತ್ತೆ. ಶ್ರೀಮಠದ ಫೇಸ್‌ಬುಕ್ ಪೇಜಿಗೆ ನಾಲ್ಕು ಲಕ್ಷ ಜನ ಫಾಲೋವರ್ಸ್ ಇದಾರೆ. ನಿರಂತರ ಅಪ್‌ಡೇಟ್ ಆಗ್ತಾ ಇರುತ್ತೆ. ಪ್ರವಚನಗಳು ಲೈವ್ ಸ್ಟ್ರೀಮಾಗುತ್ತವೆ...' ಎನ್ನುವ ಅನಂತನ ಮುಂದಿನ ಮಾತುಗಳು ಬಹು ಮುಖ್ಯವಾದವು. '... ಸ್ಮಾರ್ಟ್ ಫೋನು ಆಧುನಿಕರಾಗೋದಕ್ಕೆ ಮಾತ್ರ ಮಾಧ್ಯಮವಾಗಿಲ್ಲ. ನಮ್ಮ ನಂಬಿಕೆಗಳನ್ನು ವ್ಯಾಲಿಡೇಟ್ ಮಾಡೋದು ಮೊದಲಿಗಿಂತ ಈಗ ಸುಲಭ' ಎನ್ನುತ್ತಾನೆ.

ಮಾನವನನ್ನು ಮನುಷ್ಯನಾಗಿಸುವ ಎಲ್ಲ ಬಗೆಯ 'ಧರ್ಮ'ಗಳ ಕುರಿತಾಗಿನ ನಿಷ್ಠೆಯ ಸುತ್ತ ಇರುವ ತಾತ್ವಿಕ ಜಿಜ್ಞಾಸೆಯನ್ನು ಪರಿಪರಿಯಾಗಿ ವಿಶ್ಲೇಷಿಸುವ ಈ ಕಾದಂಬರಿಯ ಹೃದಯ 'ಅಟ್ ಅ ರೈಟ್ ಪ್ಲೇಸ್' ಇದೆ ಎಂಬುದನ್ನು ನಿಸ್ಸಂದೇಹವಾಗಿ ಹೇಳಬಹುದು.

●